## ನಿಗೂಢ ಜೇನುಗೂಡು



ಉತ್ತರ ಕನ್ನಡ ಜಿಲ್ಲೆಯ ದಾಂಡೇಲಿ ವನ್ಯಧಾಮ, ವಿವಿಧ ಪ್ರಾಣಿಪಕ್ಷಿಗಳು ಹಾಗೂ ಸುಂದರ ಪ್ರಕೃತಿಗೆ ಹೆಸರಾಗಿದೆ. ವನ್ಯಜೀವಿಗಳನ್ನಲ್ಲದೇ ಇಲ್ಲಿ ಸಿಂಥೇರಿ ಬಂಡೆ ಎಂಬ ಪ್ರಾಕೃತಿಕ ವಿಸ್ಮಯವನ್ನೂ ನೋಡಲು ಪ್ರವಾಸಿಗರು ಹೋಗುತ್ತಾರೆ.

ದಟ್ಟ ವನ್ಯಧಾಮದ ಮಧ್ಯೆ ಇರುವ ಈ ಸಿಂಥೇರಿ ಬಂಡೆ ಸುಮಾರು 300 ಅಡಿ ಎತ್ತರದ್ದಾಗಿದ್ದು, ಸನಿಹವೇ ಹರಿಯುವ ಕಾನೇರಿ ಎಂಬ ನದಿ ರಭಸವಾಗಿ ಹರಿಯುತ್ತಾ ಇದನ್ನು ಕೊರೆದು ಹಲವಾರು ಪೊಳ್ಳಾದ ಸ್ಥಳಗಳನ್ನು ನಿರ್ಮಿಸಿದೆ. ಈ ಪೊಳ್ಳಾದ ಸ್ಥಳಗಳಲ್ಲಿ ಸಾವಿರಾರು ಪಾರಿವಾಳಗಳು ಆಶ್ರಯ ಪಡೆದಿವೆ ಹಾಗೂ ಜೇನೂ ಗೂಡು ಕಟ್ಟಿವೆ. ಇದು ತಗ್ಗಿನಲ್ಲಿದ್ದು ಇಲ್ಲಿಗೆ ತಲುಪಲು ಮೆಟ್ಟಿಲುಗಳನ್ನು ನಿರ್ಮಿಸಲಾಗಿದೆ ಹಾಗೂ ದಾರಿಯುದ್ದಕ್ಕೂ ಹಲವಾರು ಬಗೆಯ ಶಿಲೆಗಳನ್ನೂ ಅವುಗಳ ಬಗೆಗಿನ ಮಾಹಿತಿ ಫಲಕಗಳನ್ನೂ ಇರಿಸಲಾಗಿದೆ.

—ಬಿ.ಆರ್. ಸುಹಾಸ್, ಬೆಂಗಳೂರು



## ಕಾಕ್ ಅಲ್ಲ ಅಣಬೆ

ಮಳೆ ಹನಿ ಭೂಮಿಗೆ ಮುತ್ತಿಕ್ಕುತ್ತಿದ್ದಂತೆ ಅಣಬೆಗಳ ಸುಗ್ಗಿಗೆ ನಾಂದಿ ಹಾಡಿದಂತೆ. ಬೆಟ್ಟದ ಸೆರಗಿನ ಮರೆಯಲ್ಲಿ ಅಣಬೆಗಳ ಚೆಂದವನ್ನು ನೋಡುವುದೇ ಒಂದು ಸೊಗಸು! ಸಾವಿರಾರು ವಿಧದ ಅಣಬೆಗಳಲ್ಲಿ ಕೆಲವು ಮಾತ್ರ ತಿನ್ನಲು ಯೋಗ್ಯ. ಅಂಕೋಲಾ ತಾಲ್ಲೂಕಿನ ಮೊಗಟಾದ ಕೃಷಿಕ ಅಶೋಕ ವೆಂಕಟ್ರಮಣ ನಾಯಕ ಅವರಿಗೆ ಅಣಬೆಗಳನ್ನು ನೋಡುವುದು, ಸೇವಿಸುವುದು, ತೋರಿಸುವುದೆಂದರೆ ಬಹು ಖುಷಿ!

ಮೊಗಟಾದ ಕಾಡಿನ ಇಳಿಜಾರಿನಲ್ಲಿ ಸಿಕ್ಕ ಈ ಮೋಜಿನ ಅಣಬೆ ಶೃಂಗಾರಗೊಂಡ ನವವಧುವಿನಂತೆ ಕಂಗೊಳಿಸುತ್ತದೆ! ಬಲೆಯಾಕಾರಾದ ಬೆಲೆ ಬಾಳುವ ಪೋಷಾಕಿನಂತೆ ಕಾಣುವ ನಿಸರ್ಗದ ಉಡುಪನ್ನು ತೊಟ್ಟ ಈ ಅಣಬೆ ಕಾಣಿಸಿದ್ದೇ ತಡ ಅದನ್ನು ಹಿಡಿದು ಆನಂದ ಪಟ್ಟಿದ್ದಾರೆ.

—ಬೀರಣ್ಣ ನಾಯಕ ಮೊಗಟಾ

## ಅಣಬೆ ನೆಕ್ಲೇಸ್...!

ಮುರಿದು ಬಿದ್ದ ಅಡಿಕೆ ಮರದ ಬುಡದ ಮೇಲೆ ಮಳೆ ನೀರಿನ ಸಿಂಚನ ಆದಾಗ ಮೆಲ್ಲನೆ ತಲೆಯೆತ್ತಿ ನಿಂತ ಈ ಸಮಯಸಾಧಕ ಅಣಬೆಗಳನ್ನು ನೋಡುವಾಗ ಆಭರಣದ ಅಂಗಡಿಯಾತ ಶೋಕೇಸಿನಲ್ಲಿ ಅಂದವಾಗಿ ಜೋಡಿಸಿಟ್ಟ ಮುತ್ತಿನ ಹಾರವೋ ಎಂಬಂತೆ ಕಂಡಿತು.

ವರುಷಕೊಂದು ಹೊಸತು ಜನ್ಮ ತಳೆವ ಪ್ರಕೃತಿಯ ಈ ಕೊಡುಗೆಯನ್ನು ನೋಡುತ್ತಿರುವಾಗ 'ದೇವರು ಹೊಸೆದ ಪ್ರೇಮದ ದಾರ, ದಾರದಿ ಬೆಸೆದ ಋತುಗಳ ಹಾರ, ಋತುಗಳ ಜೊತೆಗೆ ಪ್ರೇಮದ ಪಯಣ, ಮುಗಿಯದು ಮುತ್ತಿನ ಹಾರದ ಕವನ' ಎಂಬ ಹಾಡಿನ ಸಾಲುಗಳು ನೆನಪಿಗೆ ಬಂತು.

—ಡಾಕ್ಟರ್ ವೇಣುಗೋಪಾಲ ಶರ್ಮಾ

